Reg No. B G 155 20-8-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಖರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಚಿಂತಾಮಣಿಯಲ್ಲಿ ಉಪವಾಸ ಮುಷ್ಕರ ಪ್ರಾರಂಭ

12 ನೇ ಒಂದು ಭಾಗ

ಬೆಳಗಾಂ— ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನವರು ಕಳೆದ ತಿಂಗಳಲ್ಲಿ ಓರ್ವ ಮಹಿಳೆ ಮತ್ತು 134 ಪುರುಷರಿಗೆ ಉದ್ಯೋಗ ದೊರಕಿಸಿದರು – ಈ ಸಂಖ್ಯೆಗೆ 12 ರಷ್ಟು ಮಂದಿ ಕೆಲಸಕ್ಕೆ ರಿಜಿಸ್ಟರು ಮಾಡಿಸಿದ್ದಾರೆ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯನರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ತಕ್ಕಜ್ಞತಾಪೂರ್ವಕವಂದಿಸುತ್ತೇವೆ.

'ಸಂಪಾದಕ' 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಗೂಳಿ ಕಾಳಗ

ತ್ರಿವೇಂದ್ರಂ— ಶಾಸನಸಭೆಯಲ್ಲಿ ಸಂಯುಕ್ತ ರಂಗದ ಮಾರ್ಕ್ಸಿಸ್ಟರು ಮಾರ್ಕ್ಸಿಸ್ಟೇತರ ಸದಸ್ಯರಿಗೆ ಗೂಳೀಕಾಳಗದಷ್ಟು ಮಾತುಕತೆ ನಡೆಯುತ್ತಿದ್ದಾಗ, ವಿರೋಧ ಪಕ್ಷದ ಸದಸ್ಯರು ಕೆಂಪು ಬಟ್ಟೆ ಚೂರನ್ನು ಹಾರಾಡಿಸಿದರು.

★

ವಿಜಯೋತ್ಸವ

ಹೌಸ್ಟನ್— ಇಲ್ಲಿ ನಡೆದ ವಿಜಯ ಪೆರೇಡಿನಲ್ಲಿ 3 ಮಂದಿ ಸವಾರಿ ಮಾಡುತ್ತಿದ್ದ ಚಂದ್ರ ಮಾನವರನ್ನು 3 ಲಕ್ಷ ಮಂದಿ ವೀಕ್ಷಿಸಿದರು – ಪೆರೇಡಿನಲ್ಲಿ 26 ಗಗನ ಯಾನಿಗಳು ಭಾಗವಹಿಸಿದ್ದರು.

★

ಅನ್ನ ಸತ್ಯಾಗ್ರಹ

ಚಿಂತಾಮಣಿ— ವ್ಯವಸಾಯ ಸಂಪ್ ಸೆಟ್‌ಗಳಿಗೆ ವಿದ್ಯುತ್ ದರ ಹೆಚ್ಚಿಸಿರುವದನ್ನು ಪ್ರತಿಭಟಿಸಿ ಎಲೆಪ್ಪಚೆಟ್ಟಿ ಬೋರ್ಡು ಕಚೇರಿ ಮುಂದೆ ತಾಲ್ಲೂಕು ರೈತ ಸಂಘದ 200 ಸದಸ್ಯರು ಅನ್ನ ಸತ್ಯಾಗ್ರಹ ಪ್ರಾರಂಭಿಸಿದರು.

★

ಗಾಂಜ, ಅಫೀಮು ವಶ

ಗುಲ್ಬರ್ಗ— ಮಾವಿನಪುರ ಭಾಗದಲ್ಲಿ ಪೋಲೀಸರು ಒಂದು ಮನೆ ಮೇಲೆ ಧಾಳಿ ನಡೆಸಿ ರೂ 12000 ಬೆಲೆಯ ಗಾಂಜಾ ಮತ್ತು ರೂ 4000 ಬೆಲೆಯ ಅಫೀಮನ್ನು ವಶಪಡಿಸಿಕೊಂಡರು.

★

ರೂಪಾಯಿ ಮೌಲ್ಯ

ನವದೆಹಲಿ— ರೂಪಾಯಿನ ಕೊಳ್ಳುವ ಬೆಲೆಯು ಶೇಕಡ 52.8 ತಗ್ಗಿರುವವಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು.

ಮಹಿಳಾ ಟ್ರೇನರ್

ಮೈಸೂರು— ಬೆಂಗಳೂರು ಟಫ್ ಕ್ಲಬ್ ನಿಬಂಧನೆಗಳಂತೆ ಸತಿ ಡಗ್ಲಾಸರಿಗೆ ಟ್ರೇನರ್ ಲೈಸೆನ್ಸು ಕೊಡಲಾಗಿದೆಯೆಂದೂ ಅವರು 9 ಕುದುರೆಗಳೊಡನೆ ಮೈಸೂರು ರೇಸ್‌ನಲ್ಲಿ ಭಾಗವಹಿಸಲಿರುವರೆಂದೂ ಹೇಳಲಾಗಿದೆ – ಪೂರ್ವ ದಿಕ್ಕಿನ ಭಾಗಗಳಲ್ಲೇ ಮಹಿಳಾ ಟ್ರೇನರ್ ಲೈಸನ್ಸು ಪ್ರಪ್ರಥಮವೆಂದು ಹೇಳಲಾಗಿದೆ.

●

ಅವಕಾಶವಿದೆ

ಬೆಂಗಳೂರು— ಅರ್ಹವಾದ ಸಂದರ್ಭಗಳಲ್ಲಿ ಭೂಕಂದಾಯ ಕ್ಷಮಾಪಣೆಗೆ ಭೂಕಂದಾಯ ಶಾಸನದಲ್ಲಿ ಅವಕಾಶವಿದೆಯೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

★

ಇಂದಿರಾರಿಗೆ ಸೋ ಕಾಸ್ ನೋಟೀಸು

ನವದೆಹಲಿ— ಅಧ್ಯಕ್ಷ ಚುನಾವಣೆ ಬಗ್ಗೆ ಅವರು ತೋರಿಸಿದ ವರ್ತನೆ ಕುರಿತು ಪ್ರಧಾ ಇಂದಿರಾ, ಆಹಾರಮಂತ್ರಿ ಜಗಜೀವನ ರಾಂ, ಕೈಗಾರಿಕಾ ಅಭಿವೃದ್ಧಿ ಮಂತ್ರಿ ಫಕ್ರುದ್ದೀ ಅಲ್ಲಿ ಅಹಮದ್ ರವರುಗಳಿಗೆ ಕಾಂಗ್ರೆಸ್ ಅಧ್ಯಕ್ಷರು ಸೋ ಕಾಸ್ ನೋಟೀಸು ಕೊಟ್ಟಿದ್ದಾರೆ.

★

ಕೊಚ್ಚಿಹೋದರು

ಕೊಯಮತ್ತೂರು— ಒಂದು ಗದ್ದೆ ಕೆಲಸಗಾರರು-ಮೊನ್ನೆ ರಾತ್ರೆ ಅಲ್ಲೇ ಮಲಗಿದ್ದಾಗ ಅಡವಿ ಜರಿಯಾ-ಜೋರಾಗಿ ಹರಿದುಬಂದು ಅವರನ್ನೆಲ್ಲಾ ಕೊಂಚಿಕೊಂಡು ಹೋಯಿತು – ಒಡೆದು ಹೋದ ಒಂದು ಕೆರೆಯ ಬಿರುಸಾದ ನೀರು ಇದು.

★

ಬೆಂಗಳೂರು— ರಾಜ್ಯದ ವಿಭಜನೆಯ ಪ್ರಶ್ನೆಯೇ ಇಲ್ಲವೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಶಾಸನಸಭೆಯಲ್ಲಿ ಹೇಳಿದರು.

ವಿದೇಶೀ ಬ್ಯಾಂಕುಗಳಲ್ಲಿ ರಾಜರ ಹಣ

ನವದೆಹಲಿ— 38 ಮಾಜಿ ರಾಜರಲ್ಲಿ 21 ಮಂದಿ ಮತ್ತು ರಾಜ ಮನೆತನದ 11 ಮಂದಿ ವಿದೇಶೀ ಬ್ಯಾಂಕುಗಳಲ್ಲಿ ರೂ. ರೂ 62.2 ಲಕ್ಷ ಲೆಕ್ಕ ಹೊಂದಿರುವರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ಶ್ರೀ ಅಣ್ಣಾ ಜಿರಾಯರ ನಿಧನ

ಮೈಸೂರು— ಶ್ರೀರಾಂಪೇಟೆಯಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ಪ್ರೆಸ್ಸಿನ ಶ್ರೀ ಡಿ. ಅಣ್ಣಾ ಜಿರಾಯರು ಕಳೆದ ಗುರುವಾರ ನಿಧನರಾದರೆಂದು ಪ್ರಕಟಿಸಲು ತುಂಬಾ ವಿಷಾದಿಸುತ್ತೇವೆ. ದೈವಭಕ್ತರಾದ ಇವರ ಕನಕಾಭಿಷೇಕವೂ ನಡೆದಿತ್ತು. ಸತ್ಯವಾದಿ ಪತ್ರಿಕೆ ಬಗ್ಗೆ ಇವರಿಗೆ ತುಂಬಾ ವಿಶ್ವಾಸವಿತ್ತು. ಇವರ ಆತ್ಮಕ್ಕೆ ಶಾಂತಿಯನ್ನೂ ಬಂಧುಬಳಗಕ್ಕೆ ಸಹಾನುಭೂತಿಯನ್ನೂ ಕೋರುತ್ತೇವೆ.

ಗಡಿ ವಿಷಯದಲ್ಲಿ

ಬೆಂಗಳೂರು— ಮಹಾರಾಷ್ಟ್ರದೊಡನೆಯ ಗಡಿ ವ್ಯಾಜ್ಯದಲ್ಲಿ ಮೈಸೂರು ಸರಕಾರವು ಯಾರ್ ಒತ್ತಾಯಕ್ಕೂ ಒಳಗಾಗುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಶಾಸನ ಸಭೆಯಲ್ಲಿ ಹೇಳಿದರು.

ಮುಷ್ಕರ ಬೆದರಿಕೆ

ಕಲ್ಕತ್ತಾ— ಪಶ್ಚಿಮ ಬಂಗಾಳದ ಹತ್ತೀ ಗಿರಣಿಗಳ 50000 ಕ್ಕೂ ಹೆಚ್ಚು ಕಾರ್ಮಿಕರು ಫೆಬ್ರವರಿ 1 ರಿಂದ ಮುಷ್ಕರ ಹೂಡಲು ನಿರ್ಧರಿಸಿರುವರು.

★ ನವದೆಹಲಿ— ಭಾರತದಲ್ಲಿನ ವಿಜ್ಞಾನ ಮತ್ತು ತಾಂತ್ರಿಕ ಜನರ ಸಂಖ್ಯೆ ಈ ವರ್ಷ 1 ಮಿಲಯಕ್ಕೇರುವ ಸಂಭವವಿದೆ – 1968 ನೇ ಡಿಸೆಂಬರಿನಲ್ಲಿ 984000 ಇದ್ದಿತು.

● ಕಲ್ಕತ್ತಾ— ಪಶ್ಚಿಮ ಬಂಗಾಳಾದ 300 ಟೀ ತೋಟಗಳ ಕಾರ್ಮಿಕರು ತಮ್ಮ 10 ವಿಷಯಗಳ ಕೇಳಿಕೆ ಒತ್ತಾಯ ಪಡಿಸಲು ಅನಿರ್ದಿಷ್ಟ ಕಾಲ ಮುಷ್ಕರ ಹೂಡಿರುವುದರಿಂದ ಎಲೆ ಕೊಯ್ಯುವ ಕೆಲಸ ತಣ್ಣಗಾಗಿದೆ.

ನಾಸ್ತಿಕತ್ವ

ಮದರಾಸು— ಸೆಪ್ಟಂಬರ್ 15 ರಂದು ರಾಜ್ಯದ 60 ಪಟ್ಟಣಗಳಲ್ಲಿ ಅಣ್ಣಾ ದೊರೈರ ಕಂಚಿನ ಶಿರಃಪ್ರತಿಮೆಗಳನ್ನು ಅನಾವರಣೆ ಮಾಡಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿಯವರು ಹೇಳಿದಾರೆ. ಇದಕ್ಕಾಗಿ ಬೇಕಾದ ರೂ. 2 ಲಕ್ಷ ವನ್ನು ಸಾರ್ವಜನಕರಿಂದೆ ಚಂದಾ ಶೇಖರಿಸಲಾಗುವುದೆಂದಿದ್ದಾರೆ.

† ಡಿ ಎಂ ಕೆ ದೇವರನ್ನು ನಂಬುವದಿಲ್ಲ. ಮದ್ರಾಸಿನಲ್ಲಿ ಧೂರ್ತ ನಾಸ್ತಿಕ ನಾಯಿಕರ್ ಸ್ಟ್ಯಾಚೂ ಕೆಳಗೆ " ದೇವರಲ್ಲಿ ನಂಬಿಕೆ ಹೊಂದಿರುವವನು ಮುಟ್ಠಾಳ " ಎಂದು ಕೆತ್ತಲಾಗಿದೆ. ಡಿ ಎಂ ಕೆ ಸದಸ್ಯರು ದೇವಾಲಯಕ್ಕೆ ಹೋಗಕೂಡದು ; ಹೋದರೆ ಸದಸ್ಯತ್ವ ಕಳೆದುಕೊಳ್ಳುತ್ತಾರೆ. ಡಿ ಎಂ ಕೆ 60 ಪಟ್ಟಣಗಳಲ್ಲಿ ಅಣ್ಣಾ ದೊರೈರ ಪ್ರತಿಮೆ ಇಡುತ್ತಾರೆ : ಅಣ್ಣಾ ದೊರೈರನ್ನು ದೇವರನ್ನಾಗಿ ಮಾಡಿ, ಅವರ ಪ್ರತಿಮೆಗಳನ್ನು ಹೊಸ ರೀತಿ ದೇವಾಲಯಗಳಲ್ಲಿಡುತ್ತಾರೆ : ಇದೊಂದು ನೂತನ ತರಹೆಯ ವಿಗ್ರಹಾರಾಧನೆ : ಶಿವ, ವಿಷ್ಣು ಬಿದಲು, ಅಣ್ಣಾ !

ಎಂತಹ ಭಯಂಕರ-ಅನುಕರಣ ! (ಟ್ರೂತ್)

★

ಕಾರ್ಪುರ— ಕಾಂಗ್ರೆಸ್ಸಿನಲ್ಲಿ ಮುಖಾಮುಖಿ ಈಗ ಪ್ರಾರಂಭವಾಗಿದೆ ಎಂದು ಪಾರ್ಲಿಮೆಂಟು ಸದಸ್ಯ ಶ್ರೀ ಅರ್ಜುನ ಅರೋರಾ ಹೇಳಿದರು — ಇಂದಿರಾರು ಪ್ರಗತಿ ಶಕ್ತಿಯ ನಾಯಕಿಯರಾಗಿ ಮುಂದುವರಿಯುವರು ; ಕಾಂಗ್ರೆಸ್ ಅಧ್ಯಕ್ಷರು ಮತ್ತು ಅವರ ಸಿಂಡಿಕೇಟನ್ನೂ, ಅವರ ತುಂಟತನದ ಯೋಜನೆಯನ್ನು ಜಾರಿಗೆ ತರುವ ಮುಂಚೆಯೇ ಮಟ್ಟಾಹಾಕಬೇಕೆಂದೂ ಹೇಳಿದರು.

ಶಿವಮೊಗ್ಗಾ— ಸ್ವಾತಂತ್ರ್ಯ ದಿನೋತ್ಸವದಂದು ಮೆಗ್ಗಾ ಆಸ್ಪತ್ರೆ ರೋಗಿಗಳಿಗೆ ಹಣ್ಣು, ಶಾಲಾ ಮಕ್ಕಳಿಗೆ ಸಿಹಿಯೂ ಹಂಚಲಾಯಿತು.

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja Mysore, and other personages have extended messages of felicitations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಪುಡ್‌ಲ್ಯಾಂಡ್ಸ್ ಜಯಪ್ರದ 4 ನೇ ವಾ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ— ತಾ. 15–8–69 ರಿ

ಅಮೋಘ ಆಕರ್ಷಣೀಯ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್

ನಪ್‌ನೋನ್ ಕ ಸೌದಾಗರ್

ನಟವರ್ಗ— ರಾಜಕಪೂರ್, ಹೇಮಮಾಲಿನಿ
ಸಂಗೀತ : ಶಂಕರ್ ಜೈಕಿಷನ್
ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮುಖ್ಯ ಪ್ರಾಣಿದಯಾ ಕಾರ್ಯಗಳು ಹೆಚ್ಚೆ ಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಹೆಂಚಲು ನೀಡಿ

Protect the Cow

SHAKTI SUDHA

A Superb Tonic

Edited, Printed & Published by Dharmaprachara Nirati M S Krishna Rao (Proprietor) at the Satyavadi Press Chamarajapuram, Mysore 4